ಮನೆಗೆ ಭವಿಷ್ಯ ಹೇಳಾಕ ಹೋಗಿರಬೇಕು. ತಮ್ಮ ಕಷ್ಟಕ್ಕ ಹೊಲ ಮಾರಾಕ ಹತ್ತೇವಿ ಅಂದಿರಬೇಕು. ಬಹುಶಃ ಚಾದಂಗಡಿಯವರು ಖರೀದಿ ಮಾಡಬಹುದು ಅಂತನೂ ಒಂದು ಮಾತು ಅಂದಿರಬೇಕು. ನಿನ್ನ ಕುರ್‍ರಮಾಮಾ ಆ ವಿಷಯ ತಂದು ನಮ್ಮ ತಲಿಯೊಳಗ ತುಂಬಿದ. ಅಷ್ಟೇ.'


'ನೀವು ಯಾವಾಗ್ಲೂ ಹೀಂಗ ತಗೋರಿ. ಸಹಾಯ ಮಾಡಿದವರಿಗೆ, ಖರೆ ಹೇಳಿದವರಿಗೆ, ಕಷ್ಟಕಾಲದಾಗ ಕೈ ಹಿಡಿದವರಿಗೆ ಚುಲೋ ಅಂತ ಎಂದು ಹೇಳೀರಿ? ಯಾವಾಗಲೂ ನೀವೊಬ್ಬರೆ ಮಾಡೀರಿ, ಎಲ್ಲಾ ನಿಮ್ಮಿಂದಲೆ ಆಗೇತಿ ಅನ್ನೋ ಕಲ್ಪನಾ ನಿಮ್ಮದು. ಅದು ಹೋಗ್ಲಿ ಬಿಡ್ರಿ. ಈಗ ಸಂಪಿಗೆ ಗಿಡ ಕಡಿಯೋ ವಿಚಾರ ಕೈಬಿಟ್ಟು ಹೊಲದೊಳಗಿನ ಮುಳ್ಳಿನ ಗಿಡ ಕಡಿಸಹೋಗ್ರಿ.'

ಹೆಂಡತಿಯ ಮಾತಿಗೆ ದೇವಣ್ಣ ಕೊನೆಗೂ ಸುಮ್ಮನಾಗಿದ್ದ. ಕಾಕಾನನ್ನು ಕೇಳಿದರೆ ಆತ ಒಂದಕ್ಕೆ ಹತ್ತು ಹೇಳುತ್ತಾನೆ. ಆತ ಇದೇ ಕಾಬೂದಲ್ಲಿ ಇನ್ನೊಂದೆರಡು ಸಂಪಿಗೆ ಸಸಿ ನೆಟ್ಟು ಮತ್ತಷ್ಟು ಸರ್ಪ ಬರುವಂತೆ ಮಾಡಿದರೆ ಏನು ಮಾಡುವುದು! ಹೊಟೇಲ್ ಹತ್ತಿರದ ಈ ಸಂಪಿಗೆ ಗಿಡ ಮತ್ತು ಅದರ ಹೂವಿನ ಸುಗಂಧಕ್ಕೆ ಮನಸೋಲದವರೆ ಇರಲಿಲ್ಲ. ಮುಂಜಾನೆ ಮತ್ತು ಸಾಯಂಕಾಲದ ಹೊತ್ತು ಅದರ ಪರಿಮಳ ಇಡೀ ಹಳ್ಳಿಗೆ ಹರಡುತ್ತಿತ್ತು. ಮೂವತ್ತರಿಂದ ನಲವತ್ತು ಫೂಟು ಎತ್ತರವಿದ್ದ ಅದರ ಬೊಡ್ಡೆಯಂತೂ ಎಷ್ಟೊಂದು ನುಣುಪು. ಕಂಡಕ್ಟರ್ ಸುಭಾಸ ಇಲ್ಲಿಂದ ಹೋಗುವಾಗಲೆಲ್ಲ ತನ್ನ ಕಿಸೆಯಲ್ಲಿ ಸಂಪಿಗೆಯ ಒಂದೆರಡು ಹೂವು ಇಟ್ಟುಕೊಂಡೆ ಹೋಗುವನು. ಒಂದೊಂದು ಸಲ ಇಡೀ ಬಸ್ಸಿನ ತುಂಬ ಸಂಪಿಗೆ ಹೂವಿನ ವಾಸನೆಯಿರುವುದು. ಆ ಸಮಯದಲ್ಲಿ ಎಲ್ಲರೂ ಕಂಡಕ್ಟರ್‌ನತ್ತ ನೋಡಿ ಮೆಲುನಗೆ ಸೂಸುವರು. ಸಂಪಿಗೆ ಹೂವಿನ ದಿನಗಳು ಮುಗಿದುಹೋದವೇನೊ? ಆ ಹೂವುಗಳನ್ನು ಈಗ ಇಲ್ಲಿಂದ ಯಾರೂ ಒಯ್ಯುವವರಿಲ್ಲ. ಸುಭಾಸ ಆ ಗಿಡದ ಹತ್ತಿರವೆ ಸತ್ತುಹೋದ ಅಪಶಕುನವೊಂದು ಅದಕ್ಕೆ ಸುತ್ತಿಕೊಂಡಿದೆ. ಹಾಗಿದ್ದರೆ ಲಕ್ಷಾಂತರ ಗಿಡಗಳ ಸುತ್ತ ಅಪಶಕುನ ಸುತ್ತಿಕೊಳ್ಳಬೇಕಿತ್ತು. ಮನುಷ್ಯರು ಕೆಟ್ಟದ್ದನ್ನು ಎಷ್ಟು ಸಲೀಸಾಗಿ ಪ್ರಕೃತಿಗೆ ಕಟ್ಟಿಬಿಡುತ್ತಾರೆ. ಆ ಗಿಡವಿದ್ದುದಕ್ಕೆ ಇಷ್ಟು ದಿನ ಆತ ಬದುಕಿದ. ಇಲ್ಲವಾದರೆ ಯಾವಾಗಲೋ ಇಲ್ಲಿಂದ ನಿರ್ಗಮಿಸಬೇಕಿತ್ತು ಎಂದು ಯಾಕೆ ಯೋಚಿಸುವುದಿಲ್ಲ.

ಸಂಪಿಗೆ ಹೂವುಗಳನ್ನು ದುಂಡಪ್ಪ ಯಾವಾಗಲಾದರೊಮ್ಮೆ ಆಯ್ದುಕೊಂಡು ಹೊಂಗಲದಲ್ಲಿ ತನ್ನ ಪರಿಚಯದವರಿಗೆ ಕೊಟ್ಟಾಗ ಅವರು ಹಿರಿಹಿರಿ ಹಿಗ್ಗುವರು. ಬೊಡ್ಡೆಯ ಸುತ್ತಲೂ ಬಿದ್ದುಕೊಂಡ ಹೂವಿನ ಗಂಧ ಬಸ್ಸಿನ ಬೆನ್ನು ಹತ್ತಿ ಎಷ್ಟೋ ದೂರದವರೆಗೆ ಹೋಗುವುದು. ಅದರ ಎಲೆಗಳೆಲ್ಲ ಎಷ್ಟೊಂದು ಹಸಿರು. ನೀರು ಹಣಿಸುವವರಿದ್ದರೆ ಇನ್ನೂ ನಳನಳಿಸುತ್ತಿತ್ತೇನೊ! ನಿತ್ಯ ಹರಿದ್ವರ್ಣದ ಈ ಸಂಪಿಗೆ ಬಿಟ್ಟು ಉಳಿದಂತೆ ಹೊಟೇಲಿನ ಅಂಗಳದಲ್ಲಿ ಕಸಕಡ್ಡಿದೂಳುಒಡೆದ ಹಂಚು ಚೂಪಾದ ತಗಡು ಬಿದ್ದುಕೊಂಡು ಒಂದು ಅರಾಜಕತೆಯನ್ನು ಸೃಷ್ಟಿಸಿದ್ದವು. ಬಾಗಿಲಿಗೆ ದೊಡ್ಡ ಕೀಲಿ ಹಾಕಿದ್ದಾರೆ. ಹೊರಗೆ ಸ್ಟೂಲಿನ ಕಂಬಗಳು ಮಾತ್ರ ಉಳಿದುಕೊಂಡಿದ್ದು ಅದರ ಮೇಲೆ ಕೂಡ್ರಲಿಕ್ಕೆ ಹಾಕಿದ್ದ ಹಲಗೆಯ ಪಳಿಯನ್ನು ಯಾರೋ ಕದ್ದೊಯ್ದಿರಬೇಕು.

ಅಂಗಳಕ್ಕೆ ಹೊಂದಿಕೊಂಡಿದ್ದ ಛಾವಣಿ ತುಸು ಬಾಗಿದೆ, ತುಸು ಬಿದ್ದಿದೆ. ಹೊಟೇಲಿನ ಆವಾರ ಗೋಡೆಯ ಮೇಲೆ ಹಚ್ಚಿದ್ದ ಸಿನೆಮಾ ಪೋಸ್ಟರ್‌ಗಳು ಹರಿದುಹೋಗಿ ಅಲ್ಲೊಂಚೂರು, ಇಲ್ಲೊಂಚೂರು ಉಳಿದುಕೊಂಡಿವೆ. ಗಾಳಿ ಬೀಸಿದಾಗ ಹಾರಿ ಅಲ್ಲಿಯ ಮೌನದಲ್ಲಿ ವಿಚಿತ್ರ ಶಬ್ದ ಹೊರಡಿಸುವವು. ಹಿಂದೆ ಹೊಂಗಲಿನ ಟಾಕೀಸುಗಳಲ್ಲಿ ಸಿನೆಮಾ ಬದಲಿಯಾದಾಗ ಆ ಸಿನೆಮಾದ ಪೋಸ್ಟರ್‌ಗಳನ್ನು ತಂದು ಇಲ್ಲಿ ಹಚ್ಚುತ್ತಿದ್ದರು. ಮಲ್ಲೂರಿನಿಂದಲೂ ಸಾಕಷ್ಟು ಮಂದಿ ಸಿನೆಮಾ ನೋಡಲು ಬರುತ್ತಾರೆಂದು ಮಾಲೀಕರಿಗೆ ಗೊತ್ತಿತ್ತು. ಹೊಟೇಲಿಗೆ ಹೊಂದಿಕೊಂಡಂತೆಯೇ ಇದ್ದ ದುಂಡಪ್ಪಕಾಕಾನ ಹೊಲದ ಸೂರ್ಯಕಾಂತಿ ಬೆಳೆ, ಬದುವಿಗೆ ಎತ್ತರಕ್ಕೆ ಬೆಳೆದಿದ್ದ ತೇಗಿನ ಮರಗಳ ಅಗಲ ಎಲೆ ಹಾಗೂ ತನ್ನ ಪರಿಮಳ ತೊರೆದು ಪ್ರಪಂಚ ಬದುಕಲಾರದೆನ್ನುವ ಸಂಪಿಗೆ ಮರ ಹಿಂದಿನ ಲವಲವಿಕೆಯನ್ನು ಸ್ವಲ್ಪ ಹೊತ್ತು ಅಂಗಳದಲ್ಲಿ ತರುವುದು. ಅದು ಕ್ಷಣಮಾತ್ರ.

ಮುಂದಿನ ಗಳಿಗೆಯಲ್ಲಿ ಆ ಉಲ್ಲಾಸ ಎತ್ತಲೋ ಮಾಯವಾಗಿರುತ್ತಿತ್ತು. ಚಾದಂಗಡಿಯ ನಗು, ಕೇಕೆ, ಹುರುಪು, ಹುಮ್ಮಸ್ಸು, ಗಜಿಬಿಜಿ ಎಲ್ಲವೂ ಎಲ್ಲಿ ಹೋದವು? ಹೊಟೇಲ್ ಮುಂದುಗಡೆಯಂತೂ ಹತಾಶೆಯೆ ಹೊದ್ದುಕೊಂಡು ಬಿದ್ದಿದೆ. ಅಲ್ಲಿಗೆ ಬಂದು ನಿಲ್ಲುವ ಪ್ರತಿ ಬಸ್ಸಿನ ನಿಟ್ಟುಸಿರು ಹೊಟೇಲಿನ ಹೊಸ್ತಿಲನ್ನು ಮುಟ್ಟಿ ಬರುತ್ತಿತ್ತು. ಗೊತ್ತುಗುರಿಯಿಲ್ಲದ ವಿಷಣ್ಣತೆಯೊಂದು, ಧ್ವನಿಸಲಾರದ ವಿಲಾಪವೊಂದು ಅಲ್ಲಿ ಮನೆ ಮಾಡಿದ್ದವು. ಸದ್ಯದ ಸ್ಥಿತಿಯಲ್ಲಿ ಅವು ಕೇಡಿನ ರೂಪಕವಾಗಿಯೂ ಅವನತಿಯ ಅವಶೇಷಗಳಾಗಿಯೂ ಕಾಣುತ್ತಿದ್ದವು. ತಮಗೆ ಗೋಚರಿಸುತ್ತಿರುವುದು ಬರೀ ಹೊಟೇಲಿನ ಅವನತಿಯೆ? ಇನ್ನೊಂದು ರೀತಿಯಲ್ಲಿ ಅದು ಊರಿನ ಅವನತಿಯೂ ಅಲ್ಲವೆ? ಕೆಲವೊಬ್ಬರು ತಮ್ಮ ಹಳಹಳಿಕೆ ಹಂಚಿಕೊಂಡಾಗ ಹೌದಲ್ಲ ಅನಿಸುವುದು. ಹೊಟೇಲ್ ಬಂದು ಊರನ್ನು ಹಾಳುಗೆಡವಿತು ಎಂದವರು ಈಗ ಬೇರೆ ಬೇರೆ ಊರುಗಳ ಬೇರೆ ಬೇರೆ ಹೊಟೇಲುಗಳನ್ನು ಯಾಕೆ ಹುಡುಕಿಕೊಂಡು ಹೋಗುತ್ತಿದ್ದಾರೆ? ಊರಿನ ಹೊಟೇಲ್ ಇದ್ದಿದ್ದರೆ ಚೆನ್ನಾಗಿತ್ತೆಂದು ಯಾಕೆ ತಮ್ಮಷ್ಟಕ್ಕೆ ತಾವು ಗುಪ್ತವಾಗಿ ಮಾತನಾಡಿಕೊಳ್ಳುತ್ತಾರೆ? ಒಂದು ಓಘದಲ್ಲಿ ಹೊರಟಿದ್ದ ಊರು ಯಾಕೆ ತನ್ನ ವೇಗೋತ್ಕರ್ಷವನ್ನು ಕಳೆದುಕೊಂಡಿತು? ಏರುತ್ತಿರುವ ವಿಮಾನವೊಂದು ತನ್ನ ವೇಗವನ್ನು ಒಮ್ಮೆಲೆ ತಗ್ಗಿಸಿಕೊಂಡರೆ ಏನಾಗುತ್ತದೆ? ದೇವಪ್ಪ ಮಲ್ಲೂರಿಗೆ ಅಲ್ಲಸಲ್ಲದ ಆಧುನಿಕತೆಯನ್ನು ತಂದು ಊರ ಸಂಸ್ಕೃತಿಗೆ ಅಪಚಾರ ಮಾಡುತ್ತಿದ್ದಾನೆಂದು ಹಿಂದೆ ಹಂಗಿಸುತ್ತಿದ್ದವರು, ಈಗ ತಮ್ಮ ಮಕ್ಕಳು ಬೆಳಗಾವಿ ಧಾರವಾಡದಲ್ಲಿ ಓದಲೆಂದು ಯಾಕೆ ಬಯಸುತ್ತಾರೆ? ಊರಿಗೆ ಹೆದ್ದಾರಿ ಯಾವಾಗ ಬರುತ್ತದೆಯೆಂದು, ಪೆಟ್ರೋಲ್ ಪಂಪ್ ಸಮೀಪ ಇದ್ದಿದ್ದರೆ ಚೆನ್ನಾಗಿರುತ್ತಿತ್ತೆಂದು ಯಾಕೆ ಅಂದುಕೊಳ್ಳುತ್ತಾರೆ? ಅವನಿಲ್ಲದ ಊರಲ್ಲಿ ಸೊಗಸೆ ಇಲ್ಲವೆಂದು, ಊರು ಭಣಭಣ ಅನ್ನುತ್ತಿದೆಯೆಂದು ಯಾಕೆ ನೆನೆಸಿಕೊಳ್ಳುತ್ತಾರೆ? ಅನಸೂಯಾ ಇಲ್ಲದ್ದಕ್ಕೆ ಲಂಗ, ಬ್ರಾ, ಚೂಡಿದಾರ್, ದಾವಣಿ ತರಲು ಹೆಂಗಸರು ಹೊಂಗಲಕ್ಕೆ ಹೋಗುವಂತಾಗಿದೆ.



ಅವರು ಹೋಗಬಾರದೆಂತಲ್ಲ, ಆದರೆ ಅಷ್ಟು ದೊಡ್ಡ ಅಂಗಡಿಯ ಒಳಗೆ ಹೋಗಿ ತಾವು ಕೇಳುವುದು ಅವರಿಗೆ ತುಂಬ ನಾಚಿಕೆಯ ಸಂಗತಿ. ಅಲ್ಲದೆ ಸಣ್ಣ ರಕಮಿನ ವಸ್ತುವನ್ನು ವಿಚಾರಿಸಬೇಕಾದಾಗ ಮುಜುಗರವೋ ಮುಜುಗರ. ತಮ್ಮ ಬಗ್ಗೆ ಅವರು ಏನೆಂದುಕೊಳ್ಳುತ್ತಾರೇನೊ? ಹಳ್ಳಿಯವರಿಗೆ ಏನೂ ಗೊತ್ತಿರುವುದಿಲ್ಲವೆಂದು ವ್ಯಂಗ್ಯದಿಂದ ದೃಷ್ಟಿ ಹಾಸುತ್ತಾರೆ. ಪ್ರತಿ ಚಟುವಟಿಕೆಯನ್ನು ಊರು ಈಗ ಹೊಸದಾಗಿ ಕಲಿಯುತ್ತಿರುವಂತಿದೆ. ಊರು ಚಲಿಸುತ್ತಿದೆಯೊ? ಇಲ್ಲವೊ? ವೇಗದಲ್ಲಿ ಸಾಗುತ್ತಿದ್ದ ವಾಹನವೊಂದು ಗಕ್ಕನೆ ನಿಂತುಬಿಟ್ಟಿತು. ಇದು ವಾಹನದ ತಪ್ಪೊ? ಚಾಲಕನ ತಪ್ಪೊ? ಅದರಲ್ಲಿ ಕುಳಿತವರ ತಪ್ಪೊ? ದಾರಿಯ ತಪ್ಪೊ? ಕಂಡಕ್ಟರ್‌ನ ಸಾವಿಗೆ ಏನೆಲ್ಲ ಆರೋಪಿಸಿಕೊಂಡು ಊರಿನ ಆ ಕೆಲಸ, ಈ ಕೆಲಸ ನಿಂತುಬಿಟ್ಟವು. ಈಗಿನವರೆಗೆ ಕ್ರಿಯಾಶೀಲವಾಗಿ ದುಡಿಯಬೇಕೆಂಬ ಹುಮ್ಮಸ್ಸೆ ಇಲ್ಲ. ಹಿಂದೆ ಹೊಂಗಲದ ಬಸ್‌ಸ್ಟಾಂಡಿನಲ್ಲಿ ಮಲ್ಲೂರಿನ ಬಸ್ಸು ಹೊರಡದಿದ್ದರೆ, ಬಸ್ಸು ರದ್ದಾದರೆ ಎಷ್ಟೊಂದು ಗಲಾಟೆಯಾಗುತ್ತಿತ್ತು. ಈಗಂತೂ ಅನೇಕ ಸಲ ಸಂಜೆಯ ಬಸ್ಸು ಬರುವುದೇ ಇಲ್ಲ. ಯಾಕೆ ಬರಲಿಲ್ಲವೆಂದು ಕೇಳುವವರಿಲ್ಲ. ಮುಷ್ಕರ ಹೂಡುವವರಿಲ್ಲ. ಧೈರ್ಯದಿಂದ ಪ್ರಶ್ನೆ ಮಾಡುವವರಿಲ್ಲ. ಇದ್ದುದರಲ್ಲಿಯೇ ಯಲ್ಲವ್ವನ ಮಕ್ಕಳು ಶಿವಣ್ಣ ಮತ್ತು ಸಿದ್ದಣ್ಣ ಸ್ವಲ್ಪಮಟ್ಟಿಗೆ ಉತ್ತಮವೆಂದು ಕಂಡಬರುತ್ತಾರೆ. ಊರು ಅಂಧಕಾರದಿಂದ ತುಂಬಿಕೊಂಡು ರಾತ್ರಿಯಾದರೆ ಬಹಳಷ್ಟು ಜನ ಹೊರಬರಲು ಹೆದರುತ್ತಾರೆ.

ಹಿಂದೆ ರಾತ್ರಿ ಹನ್ನೆರಡಾದರೂ 'ಇಲ್ಲಿಯೆ ಚಾದಂಗಡಿ ಹತ್ತಿರ ಹೋಗಿ ಬರ್ತೇನಿ' ಎನ್ನುತ್ತಿದ್ದರಲ್ಲ? ಮಲ್ಲೂರನ್ನು ತುಂಬಿಕೊಂಡಿರುವ ಈ ಶೋಕ ಮತ್ತು ವಿಷಾದವನ್ನು ಹೇಗಾದರೂ ಹೊರದೂಡಬೇಕೆಂದು ಅನೇಕರು ಯೋಚಿಸುತ್ತಲೇ ಇದ್ದರು. ಒಂದು ಸಲ ಊರವರೆಲ್ಲ ಕೂಡಿದಾಗ ತಮಗೆ ಅನುಕೂಲವಾಗುವ ಸ್ಥಳದಲ್ಲಿ ಯಾರಾದರೂ ಚಾದಂಗಡಿ ಸುರು ಮಾಡಿದರೆ ಒಳ್ಳೆಯದೆಂದು ದುಂಡಪ್ಪಕಾಕಾ ಸಲಹೆ ಕೊಟ್ಟ. ವಿರುಪಾಕ್ಷಪ್ಪನಿಗೆ ಅಂತಹ ಅಲ್ಪಸ್ವಲ್ಪ